## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ದಿನಾಂಕಃ 09.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಬಿ.ವಿ. ವಕೀಲರಿಂದಃ**

**1.** ದಾವಾ ಸರ್ವೆ ನಂ.47 ರ ಆಸ್ತಿಗಳು 4 ಪೋಡಿಯಾಗಿ ಸಬ್ ನಂ.1 ರಿಂದ 4 ಆಗಿವೆ ಎಂದರೆ ನಿಜ. ವಡ್ಡರ ರಾಮಯ್ಯರವರಿಗೆ ರಾಮಯ್ಯ ಎಂದು ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಆತನಿಗೆ ಸರ್ವೆ ನಂ.47 ರಲ್ಲಿ 21 ಗುಂಟೆ ಜಮೀನು ಮಂಜೂರಾಗಿತ್ತು ಎಂದರೆ ನಿಜ. 3 ಗುಂಟೆ ಕರಾಬು ಕೂಡಿ 24 ಗುಂಟೆ ಆಗಿರುತ್ತದೆ ಎಂದು ಹೇಳುತ್ತಾರೆ. ಅದರಂತೆ ಖಾತೆ ನಿಪಿ-1 ರಂತೆ ಆಗಿತ್ತು ಎಂದರೆ ನಿಜ. ಆ ರೀತಿ ಮಂಜೂರಾದ ಬಳಿಕ ಆತನಿಗೆ ಮಂಜೂರಾದ ಜಮೀನಿನ ಸರ್ವೆಯಾಗಿತ್ತು ಎಂದರೆ ನಿಜ. ಆತನಿಗೆ 3 ಗುಂಟೆ ಕರಾಬು ಸೇರಿ 24 ಗುಂಟೆ ಜಮೀನು ಸರ್ವೆ ಮಾಡಲಾಗಿತ್ತು ಎಂದರೆ ನಿಜ. ಆ ಬಗ್ಗೆ ಅದ್ದುಬಸ್ತು ಸಹ ಮಾಡಲಾಗಿತ್ತು ಎಂದರೆ ನಿಜ. ಅದು ನಿಪಿ-3 ರಂತೆ ಅದ್ದುಬಸ್ತು ಆಗಿದೆ ಎಂದರೆ ಅದನ್ನು ಸೃಷ್ಟಿ ಮಾಡಲಾಗಿದೆ ಎಂದು ಹೇಳುತ್ತಾರೆ. ರಸ್ತೆ ಬಿಟ್ಟು ಅದ್ದುಬಸ್ತು ಆಗಿದೆ ಎಂದು ಹೇಳುತ್ತಾರೆ. ಆತನ ಹೆಸರಿಗೆ 3 ಗುಂಟೆ ಕರಾಬು ಕೂಡಿ ಒಟ್ಟು 24 ಗುಂಟೆ ಜಮೀನಿಗೆ 1969-70 ರಿಂದ ಖಾತೆ ಆಗಿದೆ ಎಂದರೆ ನಿಜ. 1970 ಕ್ಕು ಮೊದಲು ಆ ರೀತಿ ಅವರ ಹೆಸರು ದಾಖಲಾಗಿತ್ತು. 1976 ರಲ್ಲಿ ನನ್ನ ತಂದೆ 12 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ಸಾಕ್ಷಿಯು 21 ಗುಂಟೆ ಪೂರ್ಣ ಜಮೀನು ಖರೀದಿ ಮಾಡಿದ್ದೆವು ಮತ್ತು ರಸ್ತೆಗೆ 9 ಗುಂಟೆ ಬಿಟ್ಟು ನನ್ನ ತಂದೆಯ ಹೆಸರಿಗೆ ಆಗಿತ್ತು ಎಂದು ಹೇಳುತ್ತಾರೆ. ನಿಡಿ-1 ಕ್ರಯಪತ್ರದಲ್ಲಿ 21 ಗುಂಟೆ ಪೈಕಿ 1 ಗುಂಟೆ ರಸ್ತೆಗೆ ಹೋಗಿದ್ದು ಉಳಿದಿರುವ ಜಮೀನಿನಲ್ಲಿ 12 ಗುಂಟೆ ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆಯು ಸಂಪೂರ್ಣ 21 ಗುಂಟೆ ಜಮೀನು ರಸ್ತೆಗೆ ಜಮೀನು ಬಿಟ್ಟು ಖರೀದಿ ಮಾಡಿದ್ದರು. 9 ಗುಂಟೆ ರಸ್ತೆಗೆ ಹೋಗಿದೆ ಎಂದು ಕ್ರಯಪತ್ರದಲ್ಲಿ ಬರೆದಿದ್ದಾರ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಸ್ತೆ ಬಿಟ್ಟು ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ.

**2.** ನನ್ನ ತಂದೆ ಖರೀದಿ ಮಾಡಿದಂತಹ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಹಾರೋಹಳ್ಳಿ ಮುನಿಸಂದ್ರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ನಮ್ಮ ಜಮೀನು, ಉತ್ತರಕ್ಕೆ ಇನ್ನೊಬ್ಬ ರಾಮಯ್ಯ ಇವರ ಜಮೀನು

ಹಾಗೂ ಅದರ ಸರ್ವೆ ನಂಬರ್ ಸಹ ಬೇರೆಯಾಗಿದೆ ಮತ್ತು ದಕ್ಷಿಣಕ್ಕೆ ನಮ್ಮ ಜಮೀನು. ಉತ್ತರಕ್ಕೆ ಬೇರೆ ಸರ್ವೆ ನಂಬರ್ ಜಮೀನು ಎಂದು ಹೇಳಿದ್ದು ಅದರ ಸರ್ವೆ ನಂಬರ್ ನನಗೆ ಈಗ ನೆನಪಿರುವುದಿಲ್ಲ. ಇನ್ನೊಬ್ಬ ರಾಮಯ್ಯರವರ ಜಮೀನು ಎಂದು ಹೇಳಿದ್ದು ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಡ್ಡರ ರಾಮಯ್ಯರವರ ತಂದೆಯ ಹೆಸರು ಹನುಮಯ್ಯ ಎಂದರೆ ನಿಜ. ಸದರಿ ರಾಮಯ್ಯನವರಿಗೆ ಆತನ ಜಾತಿ ವಡ್ಡರ ಜಾತಿಯಾಗಿರುವ ಕಾರಣ ವಡ್ಡರ ರಾಮಯ್ಯ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯು ಅವರ ಜಾತಿ ನನಗೆ ಗೊತ್ತಿಲ್ಲ ಆದರೆ ಅವರ ಹೆಸರು ವಡ್ಡರ ರಾಮಯ್ಯ ಆಗಿದೆ ಎಂದು ಹೇಳುತ್ತಾರೆ. ಆತನಿಗೆ ಸಾಮಾನ್ಯವಾಗಿ ರಾಮಯ್ಯ ಎಂದು ಕರೆಯುತ್ತಿದ್ದರು ಎಂದರೆ ಗೊತ್ತಿಲ್ಲ. ನಿಡಿ-1 ಕ್ರಯಪತ್ರದಲ್ಲಿ ಸಹ ರಾಮಯ್ಯ ಬಿನ್ ಹನುಮಯ್ಯ ಎಂದು ಬರೆಯಲಾಗಿದೆ ಎಂದರೆ ಇರಬಹುದು. ಕ್ರಯಪತ್ರದಲ್ಲಿ ಬರೆದಿರುವುದು ಸರಿ ಇರುತ್ತದೆ. ಸರ್ಕಾರದಿಂದ ಮಂಜೂರಾಗುವ ಸಮಯದಲ್ಲಿ ಆತನು ವಡ್ಡರ ಜಾತಿಗೆ ಸೇರಿದವನಾದ ಕಾರಣ ವಡ್ಡರ ರಾಮಯ್ಯ ಎಂದು ಮಂಜೂರು ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

**3.** 1976 ನಲ್ಲಿ ನನ್ನ ತಂದೆಯು ಜಮೀನು ಖರೀದಿ ಮಾಡಿದ ಬಳಿಕ ನನ್ನ ತಂದೆ ಮತ್ತು ರಾಮಯ್ಯನ ಹೆಸರು ಪಹಣಿಗಳಲ್ಲಿ ಮುಂದುವರೆದುಕೊಂಡು ಬಂದಿದೆ ಎಂದರೆ ಸರಿಯಲ್ಲ. ನಿಡಿ-1 ಕ್ರಯಪತ್ರದಲ್ಲಿ ನನ್ನ ತಂದೆ ಖರೀದಿ ಮಾಡಿದಂತಹ ಸ್ವತ್ತಿನ ವಿಸ್ತೀರ್ಣ 12 ಗುಂಟೆ ಎಂದು ನಮೂದಾಗಿದೆ. ನನ್ನ ತಂದೆಗೆ ಸದರಿ ರಾಮಯ್ಯರವರು ಉತ್ತರದ ಕಡೆಯ ಜಮೀನು ಉಳಿಸಿಕೊಂಡು ದಕ್ಷಿಣದ ಕಡೆಯ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರ ನಿಡಿ-1 ಕ್ರಯಪತ್ರದಲ್ಲಿ ಚೆಕ್ಕುಬಂದಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಡಿ-1 ಕ್ರಯಪತ್ರದ ಪ್ರಕಾರ ನನ್ನ ತಂದೆಯು ಪೂರ ಜಮೀನಿನ ದಕ್ಷಿಣದ ಕಡೆಯ 12 ಗುಂಟೆ ಜಮೀನು ಮಾತ್ರ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ತೋರಿಸಿರುವಂತೆ ಸರ್ವೆ ನಂ.47/4 ರ ಸ್ವತ್ತಿನ ಪಕ್ಕದಲ್ಲಿ ನನ್ನ ತಂದೆಗೆ ಸೇರಿದ ಸರ್ವೆ ನಂ.47/3 ರ ದಕ್ಷಿಣ ಕಡೆಯಿಂದ ಉತ್ತರದವರೆವಿಗು ಸರ್ವೆ ನಂ.47/4 ಕ್ಕೆ ಅಂಟಿಕೊಂಡಂತೆ ಇದ್ದು ಉತ್ತರದ ಕಡೆ ಸ್ವಲ್ಪ ಮುಂದಕ್ಕೆ ಸರ್ವೆ ನಂ.47/4 ಹೆಚ್ಚು ಇದೆ ಎಂದರೆ ಸರಿಯಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ನಮ್ಮ ವಕೀಲರಿಗೆ ಸದರಿ ವಡ್ಡರ ರಾಮಯ್ಯರವರಿಂದ 12 ಗುಂಟೆ ಜಮೀನು 9 ಗುಂಟೆ ರಸ್ತೆಗೆ ಹೋಗಿರುವ ಜಮೀನು ಬಿಟ್ಟು ಖರೀದಿ ಮಾಡಿಕೊಂಡಿದ್ದೇವೆ ಎಂದು ಹೇಳಿ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾವು ಈಗ ರಸ್ತೆ ಬಿಟ್ಟು 12 ಗುಂಟೆ ಮತ್ತು 1

ಗುಂಟೆ ಕರಾಬು ಜಮೀನನ್ನು ಕ್ಲೇಮು ಮಾಡುತ್ತಿದ್ದೇವೆ. ಈಗ ನನಗೆ ತೋರಿಸುತ್ತಿರುವ ನಿಪಿ-7 ದಾಖಲೆಯಲ್ಲಿ ಸ್ಕೆಚ್ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ರಸ್ತೆಯವರೆವಿಗು ನಾವು ಇದ್ದೇವೆ. ರಸ್ತೆಯು ಅಗಳವಾಗಿದ್ದು ಅಲ್ಲಿ ಯಾವುದೇ ಉಳಿಕೆ ಜಮೀನು ಇರುವುದಿಲ್ಲ ಮತ್ತು ರಸ್ತೆಯವರೆವಿಗು ನಾವು ಇದ್ದೇವೆ ಎಂದು ಹೇಳುತ್ತಾರೆ. ನಾವು ಖರೀದಿ ಮಾಡುವ ಸಮಯದಲ್ಲಿಯೇ 9 ಗುಂಟೆ ಜಮೀನು ರಸ್ತೆಗೆ ಹೋಗಿತ್ತು. 1976ರ ಪೂರ್ವದಲ್ಲಿ ದಾವಾ ಜಮೀನಿನ ಪೂರ್ವಕ್ಕೆ ಕಾಲುದಾರಿ ಮಾತ್ರ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ.47/4ರ ಜಮೀನಿನ ಬಳಿಕ ಕೋಟುರು ಗ್ರಾಮದ ಗಡಿ ಜಮೀನು ಬರುತ್ತದೆ ಎಂದರೆ ರಸ್ತೆಯ ನಂತರ ಬರುತ್ತದೆ ಎಂದು ಹೇಳುತ್ತಾರೆ. ಕೋಟುರು ಗ್ರಾಮದ ಜಮೀನು ಮತ್ತು ಸರ್ವೆ ನಂ.47ರ ಜಮೀನು ಸೇರಿಸಿ ಆ ರಸ್ತೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಸ್ವತ್ತಿನ ಹಾಲಿ ಸರ್ವೆ ನಂ.47/6 ಆಗಿದೆ. ಸರ್ವೆ ನಂ.47/6ರ ನಕ್ಷೆ ಇದೆಯಾ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಸ್ಕೆಚ್ ಕಂದಾಯ ಇಲಾಖೆಯವರು ನಮ್ಮ ಜಮೀನಿಗೆ ಮಾಡಿದಂತಹ ಸ್ಕೆಚ್ ಆಗಿದೆ ಎಂದರೆ ಗೊತ್ತಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**